ಅಸಿಸ್ಟೆಂಟ್ ಕಮೀಷನರ್‌ರವರ ಆರ್ಡರ್ ಪ್ರಕಾರ 13½ ಎಕರೆ ಜಮೀನನ್ನು ಒಬ್ಬೊಬ್ಬರಿಗೆ 4 ಎಕರೆ ಪ್ರಕಾರ 32 ಜನಕ್ಕೆ ಕೊಟ್ಟಿದೆ. ಹಾಗೆ ಕೊಟ್ಟಂಥಾ ಕಾಲದಲ್ಲಿ ರೆವಿನ್ಯೂ ಇನ್‌ಸ್ಪೆಕ್ಟರ್‌ರವರ ಒಂದು ಸ್ಕೆಚ್‌ನ ಆಧಾರದ ಮೇಲೆ ಎ ಮತ್ತು ಬಿ ಬ್ಲಾಕ್ ಅಂತ ಮಾಡಿ ಒಂದೊಂದು ಬ್ಲಾಕ್ ಅನ್ನು ಒಬ್ಬೊಬ್ಬರಿಗೆ ಕೊಟ್ಟಿದೆ. ಆವಾಗ ಇದನ್ನು ಪಕ್ಕಾ ಫೋಡಿ ಮಾಡಿಕೊಡುವ ಪದ್ಧತಿ ಇರಲಿಲ್ಲ. ಆದುದರಿಂದ ಇದು ವ್ಯಾಜ್ಯಕ್ಕೆ ಶುರುವಾಗಿ ಕೋರ್ಟಿಗೆ ಹೋಗಿದ್ದಾರೆ. ಈಗ ಅದನ್ನು ಪರಿಹಾರ ಮಾಡುವುದಕ್ಕೋಸ್ಕರ 17ನೇ ಡಿಸೆಂಬರ್ 1966ರಲ್ಲಿ ಒಬ್ಬ ಅಸಿಸ್ಟೆಂಟ್ ಸೂಪರಿಂಟೆಂಡೆಂಟ್ ಆಫ್ ಲ್ಯಾಂಡ್ ರಿಕಾರ್ಡ್ಸ್ ಅವರನ್ನು ಇದರ ಬಗ್ಗೆ ಸರ್ವೆ ಮಾಡಿ ಪಕ್ಕಾ ಫೋಡಿ ಮಾಡಿಕೊಡಿ ಎಂದು ಆರ್ಡರ್ ಮಾಡಿದ್ದಾರೆ. ಮತ್ತು ಇದಕ್ಕೆ ಒಬ್ಬ ದರಖಾಸ್ತು ಸ್ಪೆಷಲ್ ತಾಸೀಲ್ದಾರರನ್ನು ಕೂಡ ನೇಮಿಸಿದ ಮೇಲೆ 16ನೇ ನವೆಂಬರ್ 1976ರಲ್ಲಿ ಅವರುಗಳು ಸ್ಥಳಕ್ಕೆ ಹೋಗಿ ಅವರಿಗೇ ಪ್ರತ್ಯೇಕ, ಇವರಿಗೇ ಪ್ರತ್ಯೇಕ ಪ್ರತ್ಯೇಕವಾಗಿ, ಯಾರು ಯಾರಿಗೆ ಯಾವ ಯಾವ ಭಾಗ ಒಳಪಡುತ್ತದೆ ಅನ್ನುವುದನ್ನು ಹೇಳಿದ್ದಾರೆ. ಈಗ ಅವರುಗಳು ಇದಕ್ಕೆ ಒಪ್ಪಿಕೊಂಡು ಒಂದು ತೀರ್ಮಾನ ಆಗುವ ಪರಿಸ್ಥಿತಿ ಬಂದಿದೆ.

ಶ್ರೀ ಕೆ. ಸಿದ್ದಯ್ಯ—ನಾನು ತಮ್ಮನ್ನು ಕೇಳಿದ್ದು ಕಾಗಲವಾಡಿಯವರಿಗೂ ಮತ್ತು ದೊಡ್ಡರಾಯಪೇಟೆಯವರಿಗೂ ಈ ಜಮೀನುಗಳನ್ನು ಮೊದಲನೇ ಸಾರಿ ಕೊಡುವಾಗ ಬೌಂಡರಿ ನಿಗದಿ ಮಾಡದೆ ಅವರಿಗೆ ಸರಿಯಾಗಿ ಯಾವ ಯಾವ ಜಮೀನು ಯಾರ್ಯಾರಿಗೆ ಸೇರಬೇಕೋ ಆ ಜಮೀನನ್ನು ಸ್ವಾಧೀನ ಕೊಡದೇ ಇರುವುದರಿಂದ, ಮತ್ತು ಆದೇ ಜಮೀನನ್ನು ಇನ್ನೊಂದು ಗ್ರಾಮದವರಿಗೆ ಕೊಟ್ಟಿದ್ದರಿಂದ ಇದು ವ್ಯಾಜ್ಯಕ್ಕೆ ಕಾರಣವಾಯಿತಲ್ಲವೇ ?

ಶ್ರೀ ಎನ್. ಹುಚ್ಚಮಾಸ್ತಿ ಗೌಡ—ನಾನು ತಮಗೆ ಮೊದಲೇ ತಿಳಿಸಿದೆ. ಏನೆಂದರೆ ಹಿಂದೆ ಈ ಜಮೀನನ್ನು ಮಂಜೂರು ಮಾಡುವ ಕಾಲದಲ್ಲಿ ಸರಿಯಾಗಿ ಸರ್ವೆ ಮಾಡಿ ಫೋಡಿ ಮಾಡಿ ಸರಿಯಾಗಿ ವಿಂಗಡಿಸುವ ಅಭ್ಯಾಸ ಇರಲಿಲ್ಲ. ರೆವಿನ್ಯೂ ಇನ್‌ಸ್ಪೆಕ್ಟರವರ ಒಂದು ಸ್ಕೆಚ್‌ನ ಆಧಾರದ ಮೇಲೆ ಅವರಿಗೆ ಜಮೀನನ್ನು ಕೊಡುತ್ತಾ ಇದ್ದರು. ಹಾಗೆ ಕೊಟ್ಟಿದ್ದರಿಂದ ಯಾರ ಯಾರ ಹೆಸರಿಗೆ ಯಾವ ಯಾವ ಭಾಗದ ಜಮೀನು ಇದೆ ಅನ್ನುವುದನ್ನು ಸ್ಪಷ್ಟವಾಗಿ ತಿಳಿದುಕೊಳ್ಳುವುದಕ್ಕೆ ಅನಾನುಕೂಲವಾಯಿತು. ಮತ್ತು ಇದರಿಂದ ವ್ಯಾಜ್ಯ ಹುಟ್ಟುವುದಕ್ಕೆ ಕಾರಣವಾಯಿತು ಅನ್ನುವುದನ್ನು ನಾನು ಒಪ್ಪಿಕೊಳ್ಳುತ್ತೇನೆ.

ಶ್ರೀ ಕೆ. ಸಿದ್ದಯ್ಯ.—ಸ್ವಾಮಿ, ಇದರ ಬಗ್ಗೆ ಸುಮಾರು 10-20 ವರ್ಷದಿಂದಲೂ ಕೂಡ ವ್ಯಾಜ್ಯ ಇರುವುದರಿಂದ ಆ ಎರಡು ಗ್ರಾಮದವರಿಗೂ ತುಂಬಾ ನಷ್ಟವಾಗಿರುವುದರಿಂದ ಈಗಲಾದರೂ ತತ್‌ಕ್ಷಣವಾಗಿ ಇದರ ಬಗ್ಗೆ ತೀರ್ಮಾನ ಮಾಡುತ್ತೀರಾ ?

ಶ್ರೀ ಎನ್. ಹುಚ್ಚಮಾಸ್ತಿ ಗೌಡ.—ಸ್ವಾಮಿ, ನಾನು ಮೊದಲೇ ಹೇಳಿದ ಹಾಗೆ 5ನೇ ನವೆಂಬರ್ 1976ರಲ್ಲಿ ಇದಕ್ಕಾಗಿ ಒಬ್ಬ ದರಖಾಸ್ತಿನ ಸ್ಪೆಷಲ್ ತಾಸೀಲ್ದಾರನನ್ನು ನೇಮಕ ಮಾಡಿದ್ದೇವೆ. ರೆವಿನ್ಯೂ ಇನ್‌ಸ್ಪೆಕ್ಟರ್ ಮತ್ತು ತಾಸೀಲ್ದಾರರು ಸ್ಥಳಕ್ಕೆ ಹೋಗಿ ಮೊದಲು ಒಂದು ರೆವಿನ್ಯೂ ಸ್ಕೆಚ್‌ನ ಆಧಾರದ ಮೇಲೆ ಎ ಮತ್ತು ಬಿ ಬ್ಲಾಕ್ ಅಂತ ಮಾಡಿ ಆ ಜನರಿಗೆ ಏನು ತೋರಿಸಿದ್ದರೋ ಅವನ್ನು ಈಗ ಯಾವ ರೀತಿ ಮಾಡಬೇಕು ಅನ್ನುವುದನ್ನು ಆ ಎರಡೂ ಜನರನ್ನು ಕರೆಸಿ ಇದರ ಬಗ್ಗೆ ಮಾತನಾಡಿದ್ದಾರೆ. ಅವರು ಕೂಡ ಇವರು ಹೇಳಿದ್ದಕ್ಕೆ ಒಪ್ಪಿಕೊಂಡಿದ್ದಾರೆ. ಆದುದರಿಂದ ಇದು ಅದಷ್ಟು ಬೇಗ ತೀರ್ಮಾನವಾಗಬಹುದು.

Government College in Cantonment Area

213. SRI K. R. SRINIVASULU NAYUDU (Shanthinagar).—Will the Minister for University Education and Wakfs be pleased to state.—

whether it has come to the notice of the Government that there is not a single Government College in Cantonment Area ?

SRI S.M Yahya (Minister for University Education and Wakfs).—Yes.

ಶ್ರೀ ಕೆ. ಆರ್. ಶ್ರೀನಿವಾಸುಲು ನಾಯುಡು—ಸ್ವಾಮಿ, ದಂಡು ಪ್ರದೇಶದಲ್ಲಿ ಸರ್ಕಾರದ ಒಂದೇ ಒಂದು ಕಾಲೇಜು ಸಹ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಅಂತ ಕೇಳಿದ್ದಕ್ಕೆ ಗೊತ್ತಿದೆ ಅಂತ ಸುಖವಾಗಿ ಉತ್ತರ ಕೊಟ್ಟಿದ್ದೀರಿ. ಈದಂದು ಭಾಗದ 2/3 ಭಾಗದಷ್ಟು ಜನ ಇರುವುದರಿಂದ ಈ ಪ್ರದೇಶವನ್ನು ಮಲತಾಯಿ ಧೋರಣೆ ಭಾವನೆ ತೋರಿಸಿದ್ದೀರಲ್ಲಾ ಇದಕ್ಕೆ ಪ್ರಬಲವಾದ ಕಾರಣ ಏನು ಅನ್ನುವುದನ್ನು ಹೇಳುತ್ತೀರಾ ?

ಶ್ರೀ ಎಸ್. ಎಂ. ಯಾಹ್ಯಾ.—ಪಟ್ಟಣ ಬೆಳೆದಿದೆ ಅನ್ನುವುದನ್ನು ನಾನು ಒಪ್ಪುತ್ತೇನೆ. ನಿಮಗೆ ಹೇಳುವುದಾದರೆ ಬೆಂಗಳೂರಿನಲ್ಲಿ 32 ಕಾಲೇಜುಗಳು ಇವೆ. ಅದರಲ್ಲಿ 6 ಸರ್ಕಾರೀ ಕಾಲೇಜುಗಳು ಇವೆ ಬಾಕಿ 26 ಖಾಸಗೀ ಕಾಲೇಜುಗಳು. ನಮ್ಮ ಕರ್ನಾಟಕ ರಾಜ್ಯದಲ್ಲಿ ಒಟ್ಟು 213 ಫರ್ಸ್ಟ್ ಗ್ರೇಡ್ ಕಾಲೇಜುಗಳು ಇವೆ. ಅದರಲ್ಲಿ 23 ಮಾತ್ರ ಸರ್ಕಾರೀ ಕಾಲೇಜುಗಳು ಇರುವುದು. ಆ 23 ರಲ್ಲಿ 6 ಕಾಲೇಜುಗಳು ಬೆಂಗಳೂರಿನಲ್ಲಿ ಇವೆ.

ಶ್ರೀ ಕೆ. ಆರ್. ಶ್ರೀನಿವಾಸುಲು ನಾಯುಡು —ಅವರೇ ಒಪ್ಪಿಕೊಂಡಿದ್ದಾರೆ. ಈ ಪ್ರದೇಶದಲ್ಲಿ ಇಲ್ಲ ಸಿಟಿಯಲ್ಲಿ ಇವೆ ಅನ್ನುವುದನ್ನು. ನಮ್ಮ ಬೆಂಗಳೂರಿನ ದಂಡು ಪ್ರದೇಶದಲ್ಲಿ ಒಂದು ಸರ್ಕಾರೀ ಕಾಲೇಜು ಇಲ್ಲದೇ ಇರುವುದಕ್ಕೆ ಅಂಥಾ ಪ್ರಬಲವಾದ ಕಾರಣಗಳೇನು ಸ್ವಾಮಿ ? ಏತಕ್ಕೆಂದರೆ ಈ ಪ್ರೈವೇಟ್ ಕಾಲೇಜುಗಳು ಹೆಚ್ಚಿನ ಶುಲ್ಕವನ್ನು ವಸೂಲ್ಮಾಡುತ್ತಿರುವುದರಿಂದ ಅನೇಕ ಬಡ ಮಕ್ಕಳಿಗೆ ವಿದ್ಯಾಭ್ಯಾಸಕ್ಕೆ ತೊಂದರೆಯಾಗಿರುವುದರಿಂದ ನಾನು ಈ ಪ್ರಶ್ನೆಯನ್ನು ಕೇಳುತ್ತಿದ್ದೇನೆ. ಇದಕ್ಕೆ ಏನು ಉತ್ತರ ಹೇಳುತ್ತೀರಾ ?

ಶ್ರೀ ಎಸ್ ಎಂ. ಯಾಹ್ಯಾ —ಕಂಟೋನ್ಮೆಂಟ್‌ಗೆ ಒಂದು, ಸಿಟಿಗೆ ಒಂದು, ಪೊಹರ್ಲ್ಯಾಕ್ಕೆ ಒಂದು ಈ ರೀತಿಯಾಗಿ ಬೇರೆ ಬೇರೆಯಾಗಿ ಕಾಲೇಜು ಕೊಡುವುದಕ್ಕೆ ಸಾಧ್ಯವಿಲ್ಲ. ಅವಶ್ಯಕತೆ ಎಲ್ಲಿ ಇದೆ ಅಲ್ಲಿ ಕೊಟ್ಟಿದ್ದೇವೆ. ನಿಮಗೆ ಒಂದು ಉದಾಹರಣೆ ಹೇಳುವುದಾದರೆ ನಮ್ಮ ಉತ್ತರ ಕನ್ನಡ ಜಿಲ್ಲೆಯಲ್ಲಿ 12 ತಾಲ್ಲೂಕುಗಳು ಇವೆ. ಆದರೂ ಕೂಡ ಅಲ್ಲಿ ಒಂದು ಸರ್ಕಾರೀ ಕಾಲೇಜೂ ಇಲ್ಲ. ಇದನ್ನು ತಾವು ಯೋಚನೆ ಮಾಡಿ. ಇದರಿಂದ ನಾನು ಹೇಳುವುದು ಬೆಂಗಳೂರಿನಲ್ಲಿ ಬಹಳಷ್ಟು ಕಾಲೇಜುಗಳು ಇವೆ ಎಂದು,

ಶ್ರೀ ಎಸ್. ಹಮೀದ್‌ಷಾ –ಸ್ವಾಮಿ ಕಂಟೋನ್ಮೆಂಟ್ ಏರಿಯಾದಲ್ಲಿ ಒಂದೂ ಕೂಡ ಸರ್ಕಾರೀ ಕಾಲೇಜು ಇಲ್ಲದೇ ಇರುವುದರಿಂದ ಈ ಪ್ರಶ್ನೆ ಕೇಳಿದ್ದು. ಈ ಟೌನ್‌ನಲ್ಲಿ ಹೈಸ್ಕೂರ್ ಇದೆ. ಅದರ ಬಗ್ಗೆ ನಾವು ಕೇಳುತ್ತಾ ಇಲ್ಲ. ಕಂಟೋನ್ಮೆಂಟ್ ಏರಿಯಾದಿಂದ ಹುಡುಗರು ಸಿಟಿಯಲ್ಲಿರುವ ಕಾಲೇಜಿಗೆ ಬರಬೇಕಾದರೆ 10 ಮೈಲಿ ಆಗುತ್ತದೆ. ಆದುದರಿಂದ ನಮ್ಮ ಕಂಟೊನ್ಮೆಂಟ್ ಏರಿಯಾಕ್ಕೇನೇ ಒಂದು ಪ್ರತ್ಯೇಕವಾದ ಕಾಲೇಜನ್ನು ಕೊಡುತ್ತೀರಾ ?

ಶ್ರೀ ಎಸ್. ಎಂ, ಯಾಹ್ಯಾ.—ಕಂಟೋನ್ಮೆಂಟ್ ಬೇರೆ, ಸಿಟಿ ಬೇರೆ, ಅಂತ ಯೋಚನೆ ಮಾಡಿ ಕಾಲೇಜು ಕೊಡುವುದಕ್ಕೆ ಸಾಧ್ಯವಿಲ್ಲಾ. ಕಾಲೇಜುಗಳು ಎಲ್ಲ ಅವಶ್ಯಕತೆ ಇದೆಯೋ ಅಲ್ಲಿ ಇರಬೇಕು. ನಿಮಗೆ ಉದಾಹರಣೆ ಹೇಳುವುದಾದರೆ ಅನೇಕ ಹಳ್ಳಿಗಳಲ್ಲಿ 70—80 ಮೈಲಿ ಹೋದರೂ ಒಂದು ಕಾಲೇಜೂ ಇರುವುದಿಲ್ಲ. ಆ ದೃಷ್ಟಿಯಿಂದ ನಾನು ನಿಮಗೆ ಹೇಳುವುದು. ಕಂಟೋನ್ಮೆಂಟ್‌ನಲ್ಲಿ ಒಂದು ಕಾಲೇಜು ಬೇಕು ಅನ್ನುವುದಾದರೆ ಅನೇಕ ಪ್ರೈವೇಟ್ ಕಾಲೇಜುಗಳು ಇವೆಯೊಲ್ಲಾ ನಾವು ಧನಸಹಾಯ ಕೊಡುತ್ತಿದ್ದೇವೆಲ್ಲಾ ಮತ್ತೇನು.

ಶ್ರೀ ಎಸ್. ಹಮೀದ್‌ಷಾ.—ಕಂಟೋನ್ಮೆಂಟ್ ಏರಿಯಾದಲ್ಲಿರುವ ಖಾಸಗೀ ಕಾಲೇಜುಗಳಿಗೆ ಏನು ಧನಸಹಾಯ ಮಾಡುತ್ತಿದ್ದೀರಿ ಅವರು ಅನ್ಯಾಯ ಮಾಡುತ್ತಿದ್ದಾರೆ. ಆದುದರಿಂದ ಈ ಏರಿಯಾಕ್ಕೆ ಒಂದು ಸರ್ಕಾರೀ ಕಾಲೇಜು ಕೊಡಬೇಕು ಅಂತ ನಾವು ಕೇಳುತ್ತಾ ಇರುವುದು.

ಶ್ರೀ ಎಂ. ಎಸ್. ಕೃಷ್ಣನ್.— ಗ್ರಾಮಾಂತರ ಪ್ರದೇಶಗಳಲ್ಲಿಯಾಗಲೀ, ಉತ್ತರ ಕನ್ನಡ ಜಿಲ್ಲೆಯಲ್ಲಾಗಲೀ ಸರ್ಕಾರೀ ಕಾಲೇಜುಗಳನ್ನು ಸ್ಥಾಪನೆ ಮಾಡಬೇಡಿಎಂದು ನಾವು ಹೇಳುವುದಿಲ್ಲ. ಆದರೆ ಇಂದು ಆ ಖಾಸಗೀ ಕಾಲೇಜುಗಳು ಸಿಕ್ಕಾಪಟ್ಟೆ ಡೊನೇಷನ್ ಮತ್ತು ಫೀಯನ್ನು ವಸೂಲ ಮಾಡುತ್ತಿರುವುದು ಮತ್ತು ಅವು ಯಾವ ರೀತಿ ನಡೆದುಕೊಳ್ಳುತ್ತಿವೆ ಎಂಬುದು ತಮಗೆ ಗೊತ್ತಿರುವುದರಿಂದ, ದಂಡು ಪ್ರದೇಶದಲ್ಲಿಯೂ ಒಂದು ಸರ್ಕಾರೀ ಕಾಲೇಜನ್ನು ಪ್ರಾರಂಭ ಮಾಡವುದು ಒಳೆಯದಲ್ಲವೇ ? ಇದನ್ನು ವಿಚಾರ ಮಾಡುತ್ತೀರಾ ?

ಶ್ರೀ ಎಸ್ .ಎಂ. ಯಾಹ್ಯಾ. - ಈಗ ನಮ್ಮ ರಾಜ್ಯದಲ್ಲಿ 213 ಫಸ್ಟ್ ಗ್ರೇಡ್ ಕಾಲೇಜುಗಳಿವೆ. ಇವುಗಳ ಪೈಕಿ 23 ಮಾತ್ರ ಸರ್ಕಾರೀ ಕಾಲೇಜುಗಳು. ಇವುಗಳ ಪೈಕಿ 6 ಬೆಂಗಳೂರಿನಲ್ಲಿಯೇ ಇವೆ.

ಶ್ರೀ ಎಚ್.ಎನ್. ನಂಜೇಗೌಡ —ಈಗ ತಾವು ಹೇಳಿದ ಅಂಕಿ ಅಂಶಗಳ ಪ್ರಕಾರ ಗ್ರಾಮಾಂತರ ಪ್ರದೇಶಗಳಲ್ಲಿ ಈ ಕಾಲೇಜುಗಳ ಸೌಲಭ್ಯ ಕಡಿಮೆ ಇರುವುದರಿಂದ, ಇನ್ನು ಮುಂದೆ ಸರ್ಕಾರೀ ಕಾಲೇಜುಗಳನ್ನಾಗಲೀ, ಖಾಸಗೀ ಕಾಲೇಜುಗಳನ್ನಾಗಲೀ ಪ್ರಾರಂಭ ಮಾಡುವ ಕಾಲದಲ್ಲಿ ಗ್ರಾಮಾಂತರ ಪ್ರದೇಶಗಳಿಗೇ ಹೆಚ್ಚಿನ ಆದ್ಯತೆ ಕೊಡುವಂತಹ ನೀತಿಯನ್ನು ಅನುಸರಿಸುತ್ತೀರಾ?

ಶ್ರೀ ಎಸ್, ಎಂ. ಯಾಹ್ಯಾ ಆವಶ್ಯಕತೆಯ ಮೇಲೆ ತೀರ್ಮಾನ ಕೈಕೊಳ್ಳುತ್ತೇವೆ

ಶ್ರೀ ಕೆ. ಆರ್. ಶ್ರೀನಿವಾಸಲು ನಾಯ್ಡು.—ಈಗಲಾದರೂ ಸರ್ಕಾರದವರು ದಂಡು ಪ್ರದೇಶದಲ್ಲಿ ಒಂದು ಸರ್ಕಾರೀ ಕಾಲೇಜನ್ನು ಪ್ರಾರಂಭ ಮಾಡುವ ಬಗ್ಗೆ ಸಹಾನುಭೂತಿಯಿಂದ ಪರಿಶೀಲನೆ ಮಾಡುತ್ತಾರೆಯೆ ?

ಶ್ರೀ ಎಸ್, ಎಂ. ಯಾಹ್ಯಾ.—ಈ ವಿಚಾರದಲ್ಲಿ ನಮ್ಮ ಸಹಾನುಭೂತಿ ಇದ್ದೇ ಇದೆ.

Assault on Harijans in Bellary District

243. SRI B. SATHYANARAYANA SINGH (Hospet).—Will the Chief Minister be pleased to state.—

(*a*) whether it is a fact that many cases of assault and social boycott against Harijans have been reported at Ballapur, Metsi, Ittigi Muddapur, Sanapur, Kamalapur, Papinayakanahalli and Pothalakotta in Bellary District ;

(*b*) whether it is a fact that in none of the cases charge sheets have been filed : if so, the reasons for the same;

(*c*) whether it is a fact that the ryot class of Kampli Firka with the help and support of the District Minister have suppressed the SCs and have seen to it that no cases have been charge-sheeted,

(*d*) whether the Government has received any such allegations against the District Minister;

(*e*) whether it is a fact that Harijans of Kamalapur had nled a complaint against President of Town Municipality, Kamalapur alleging untouchability, social boycott and high-handed behaviour by him against Harijans, at what stage this matter stands ?